ಬೆಂಗ್ಳೂರಿಗೆ ಪೋಸ್ಟಿಂಗ್ ಆಯ್ತು. ಇಲ್ಲಿ ಮನೆ ಮಾಡಿದ್ರು. ಬೇಕಾದ್ದು ತಕ್ಕೊಂಡ್ರು. ದೊಡ್ಡ ಹುದ್ದೆ, ಅಲ್ಲಿಯ ಪರಿಚಯ, ಜನಗಳೊಟ್ಟಿಗೆ ಸುತ್ತಾಟ, ಪಟ್ಣದಲ್ಲಿದ್ದ ಪ್ರೊಗ್ರೆಸಿವ್ ಅನ್ನಿಸಿಕೊಂಡಿದ್ದ ಗುಂಪುಗಳೊಟ್ಟಿನ ಒಡನಾಟ ಮತ್ತೆ ಮೂರು ವರ್ಷ ಕಳೆದಿತ್ತು. ಅಮ್ಮ ಫೋನ್ ಮಾಡ್ದಾಗೆಲ್ಲ ಕೇಳ್ತಿದ್ರು, "ಒಳ್ಳೇ ಸುದ್ದಿ ಇಲ್ವಾ? ಹುಳುಹುಪ್ಪಟೆ ಏನೂ ಇಲ್ವಾ?" ನಗ್ತಾ ಅಂತಿದ್ಲು, "ಸುಖವಾಗಿದೆ. ಅವಸರ ಯಾಕೆ?"

ಅಮ್ಮ ಅನ್ನೋರು, "ನಾನು ಗಟ್ಟಿಯಾಗಿದ್ದಾಗ್ಲೇ ಒಂದೆರಡು ಹೆತ್ತು ಬಿಡೇ. ಬಾಣಂತನದ ಸುಖಾನಾ ಅನುಭವಿಸಿ ಬಿಡ್ತೀನಿ."

ಅಮ್ಮ ಹೇಳೋಳು. ಇವ್ಳು ನಗೋಳು.

ಕಾಲ ಕಳೆದಿತ್ತು. ಒಂದು ದಿನ ಊರಿಂದ ಫೋನು ಬಂತು. ಅವನ ಅಮ್ಮನಿಗೆ ಹುಷಾರಿಲ್ಲ ಅಂತ. ಇಬ್ರೂ ಧಾವಿಸಿದ್ರು. ಡಾಕ್ಟ್ರು ಅಂದಿದ್ರು, "ಮೈಲ್ಡ್ ಅಟ್ಯಾಕ್ ಆಗಿದೆ. ಎರಡು ಬ್ಲಾಕ್ ಆಗಿದೆ. ಬೈಪಾಸ್ ಮಾಡ್ಸಿ."

ಕರ್ಕೊಂಡು ಬೆಂಗ್ಳೂರ್‌ಗೆ ಬಂದ್ರು. ಬೈಪಾಸ್ ಆಯ್ತು. ಆರೋಗ್ಯ ಸುಧಾರಿಸ್ತು. ಇನ್ನು ಹೆಚ್ಚು ಆಯಾಸ ಬೇಡ ಅಂತ ಹೇಳಿ, ಆಕೆ ವಾಲೆಂಟರಿ ತಕ್ಕೊಂಡ್ರು. ಅಲ್ಲಿ ಊರಿಗೆ ಹೋದ್ರೆ ಕೈಬಾಯಿ ಸುಟ್ಕೊಂಡು ಬೇಯಿಸ್ಕೋಬೇಕು. ಇಲ್ಲಿ ಅಡಿಗೇವ್ರಿದ್ರು. ಇಲ್ಲೇ ಇರೋದು ಅಂತ ಆಯ್ತು.

ಒಂದಾರು ತಿಂಗಳಿಗೆ ಮಾವ, "ಅಲ್ಲಿ ನಾನೊಬ್ನೇ ಇದ್ದೇನೇ ಮಾಡ್ಲಿ? ಇಲ್ಲೇ ಇರ್ತೀನಿ" ಅಂತ ಬಂದ್ರು. ಈ ಗಲಾಟೇಲಿ ಇನ್ನೆರಡು ವರ್ಷ ಕಳೆದಿತ್ತು. ಅತ್ತೆ ಮಾವನಿಗೂ ಅಂತಹ ವಯಸ್ಸೇನಾಗಿರ್ಲಿಲ್ಲ. 50ರ ಆಸು ಪಾಸು. ಗಟ್ಟಿಯಾಗಿದ್ರು. ಆರೋಗ್ಯ ಸರಿಯಾಗಿತ್ತು. ಗಂಡ ಹೆಂಡ್ತಿ ಎಲ್ಲಿ ಸುತ್ತುತೀನಿ ಅಂದ್ರೂ ಅಲ್ಲಿಗೂ ಹೊರಟ್ರು. ಸಂಜೆ ಡಿನ್ನರಿಗೆ ಹೋಗೋಣ ನಾಲ್ಕೂ ಜನ. ವೀಕೆಂಡ್‌ನಲ್ಲಿ ಪಾರ್ಟಿಗ್ಹೋಗೋಣ ನಾಲ್ಕೂ ಜನ. ಅವರ ದೇವಸ್ಥಾನಗಳಿಗೆ ಇವರು ಪಂಚೆ ಜರಿಸೀರೇಲಿ ಹೋದ್ರು. ಇವರ ರೆಸಾರ್ಟ್‌ಗಳಿಗೆ, ವೀಕೆಂಡ್ ಪಿಕ್ನಿಕ್‌ಗೆ ಅವರು ಬರ್ಮುಡಾ ಡ್ರೆಸ್ಸುಗಳಲ್ಲಿ ಬಂದ್ರು.

ಅಪ್ಪಅಮ್ಮ ಅವರ ವಯಸ್ಸಲ್ಲಿ ಕನಸು ಕಂಡು, ನನಸಾಗದ ಬದುಕನ್ನು ಮಕ್ಕಳ ಬದುಕಿನೊಟ್ಟಿಗೆ ಕಸಿ ಮಾಡಿಕೊಂಡು ಬದುಕ್ತಿದ್ರು. ಮಕ್ಕಳಿಗೆ ಅವರ ಸ್ವಂತ ಬದುಕಿಗೆ ಪುರುಸೊತ್ತು ಕಮ್ಮಿಯಾಗ್ತಾ ಹೋಯ್ತು.

34ನೇ ಹುಟ್ಟುಹಬ್ಬ ಮಂದಾಕಿನಿಗೆ. ಸ್ವಲ್ಪ ಬ್ಯಾಕ್‌ಪೇನ್ ಅನ್ನಿಸ್ತು. ಬೆಳಿಗ್ಗೆ ಕನ್ನಡೀಲಿ ನೋಡ್ಕೊಂಡಾಗ ಸಂದೀಲಿ ಒಂದು ಬಿಳಿಕೂದ್ಲು ಇಣುಕ್ದಂಗಾಯ್ತು. ಅಪ್ಪಅಪ್ಪ, ಅತ್ತೆಮಾವ ಎಲ್ರೂಗೂ ಆಗ ಜ್ಞಾನೋದಯ ಆಗಿತ್ತು. 'ಮಂದಾಕಿನಿಗೆ ಮಕ್ಳಾಗಿಲ್ಲ.'

ಈ ಮಕ್ಳು ಅನ್ನೋದು ಒಂದು ತರಹದ ಕ್ಲೀಷೆ. ಗೊತ್ತಾಗೋಕೆ ಮೊದ್ಲು ಆಗಿ ಹೋಗ್ಬೇಕು. ಆಗಿಲ್ಲ ಅಂತ ಗೊತ್ತಾಯ್ತಾ ಮುಂಡೇದಾಗೋದೇ ಇಲ್ಲ. ಇಲ್ಲಾದದ್ದೂ ಅದೇ. ಇವರಜ್ಜಿ ಅನ್ನೋರು, ಸ್ವಾಭಾವಿಕವಾಗಿ ಆದ್ರೆ ಸಲೀಸು ಕಣೆ. ಇಲ್ವಾ ಫಜೀತಿ.

ಡಾಕ್ಟ್ರು ನೋಡಿದ್ರು. ಅವರಂದಿದ್ದು, "ಏನೂ ಸಮಸ್ಯೆ ಇಲ್ಲ. ನೀವು ಪುರುಸೊತ್ ಮಾಡ್ಕಂಡಿಲ್ಲ ಅಷ್ಟೇ."

ಎಲ್ಲಾ ಪರೀಕ್ಷೆಗಳನ್ನು ಮಾಡಿದ್ದಾಯ್ತು. ಎಲ್ಲೂ ಏನೂ ಸಮಸ್ಯೆ ಇರ್ಲಿಲ್ಲ. ಕೆಲವು ಸಲಹೆಗಳನ್ನ ಕೊಟ್ರು.

ಒಂದಾರು ತಿಂಗ್ಳು ಕಳೀತು. ಅಮ್ಮನ ಫೋನು ವಾರಕ್ಕೆರಡು ದಿನ ಬರೋದು. ನಿಧಾನವಾಗಿ